# ಆಹಾ ಸುದ್ದಿ!

★ ಸಸಿತೋಟ



ಆರೋಗ್ಯ, ವ್ಯಾಯಾಮ ಎಂದು ಎಡತಾಕುವವರಿಗೆ ಹೊಸ ಬಗೆಯ 'ಪ್ರಾಂಕ್ಸ್‌ರ್‌ಸೈಸ್' ವ್ಯಾಯಾಮ ಮೋಡಿ ಮಾಡಿದೆ. ಕುದುರೆಯ ಕೆನೆತವನ್ನು ನಕಲು ಮಾಡುವಂಥದ್ದು. ಫ್ಲಾರಿಡಾದ 60ರ ಮಹಿಳೆ ಜೋಹಾನ್ನಾ 1989ರಲ್ಲೇ ಕುದುರೆಯಂತೆ ಮುಂದಕ್ಕೆ ಕೆನೆಯುವ ವ್ಯಾಯಾಮ ಮಾಡಿ ಪುಸ್ತಕವನ್ನೂ ಬರೆದಳಂತೆ. ಅದು ಮಾರಾಟವಾಗದೆ ನಷ್ಟವೂ ಆಗಿತ್ತು. ಈಗ ಯುಟ್ಯೂಬ್‌ಗೆ ಹಾಕಿದ್ದೇ ತಡ, ಒಂದೇ ದಿನ 20 ಲಕ್ಷ ಮಂದಿ ಯುಟ್ಯೂಬ್‌ನಲ್ಲಿ ನೋಡಿದ್ದು, ಪುಸ್ತಕಗಳು ಬಿಸಿ ದೋಸೆಗಳಂತೆ ಖರ್ಚಾದವಂತೆ. ಕತ್ತೆಯ ಒದೆತಕ್ಕೂ ಯಾರಾದರೂ ಪೇಟೆಂಟ್ ಮಾಡಿಸಿರಬಹುದು, ನೋಡಿಕೊಳ್ಳಿ.

ನಾರ್ವೆಯ ಪತ್ತೇದಾರಿ ಕಾದಂಬರಿಕಾರ ಹಾನ್ಸ್ ಒಲಾವ್ ಅಲ್ಲಿಯ ಆನ್ ಲೈನ್ ಪ್ರಸಾರಕದಲ್ಲಿ ಸತತ 30 ಗಂಟೆಗಳ ಕಾಲ ಸಂದರ್ಶನ ನೀಡಿ ದಾಖಲೆ ಸ್ಥಾಪಿಸಿದ್ದಾರಂತೆ. ವೇಗವಾಗಿ ಮಾತನಾಡುವ ಹಾನ್ಸ್ ಕೆಲವೇ ಸೆಂಕೆಡ್ ಕಾಲ ಮಾತ್ರ ಬಾಯಿಗೆ ವಿರಾಮ ಕೊಡುವ ಅಭ್ಯಾಸ ಇಟ್ಟುಕೊಂಡವರು. ಕಥೆ- ಕಾದಂಬರಿ ಮಾತ್ರವಲ್ಲ, ಅಡುಗೆಯ ಬಗ್ಗೆಯೂ ಚೆನ್ನಾಗಿ ಮಾತನಾಡುವ ಹಾನ್ಸ್ ಅವರ ನಿರರ್ಗಳ ಮಾತಿನ ಹಿಂದಿನ ಇನ್ನೊಂದು ಗುಟ್ಟು ಹೊರಬಿದ್ದಿದೆ. ಅವರು ರಾಜಕಾರಣಿಯೂ ಹೌದಂತೆ!



ಈಕೆ ಸ್ಯಾನ್ ಫ್ರಾನ್ಸಿಸ್ಕೋದ ಅಜ್ಜಿ ಅಥಾ ಬಕಾಲಿನ್‌ಸ್ಕಿ. ಮೆಟ್ಟಿಲುಗಳ ಪ್ರವೀಣೆ. ಏರುವುದರಲ್ಲಿ, ಮೆಟ್ಟಿಲುಗಳ ಇತಿಹಾಸ ತಿಳಿದುಕೊಳ್ಳುವುದರಲ್ಲಿ, ಅವುಗಳ ವಾಸ್ತುಶಿಲ್ಪದ ಮಾಹಿತಿ ನೀಡುವುದರಲ್ಲಿ, ಅವುಗಳ ಬಗ್ಗೆ ಪುಸ್ತಕ ಬರೆಯುವುದರಲ್ಲಿ ಬಲು ಜಾಣೆ. ಸ್ಯಾನ್ ಫ್ರಾನ್ಸಿಸ್ಕೋದಲ್ಲಿ 650 ಕಡೆ ಇಂತಹ ಸಾರ್ವಜನಿಕ ಮೆಟ್ಟಿಲುಗಳಿದ್ದು, ಆಕೆ ಎಲ್ಲವನ್ನೂ ಏರಿದ್ದಾಳೆ. 1970ರಿಂದಲೂ ಇದೇ ಕೆಲಸವಂತೆ ಆಕೆಗೆ. ವಿಧಾನಸೌಧದ ಪಾವಟಿಗೆ ಏರುವವರು ಕೇಳಿಸಿಕೊಳ್ಳುವರೇ? ಕೆಲವರು ಎಷ್ಟು ವರ್ಷಗಳಿಂದ ಏರಿ ದಾಖಲೆ ಮಾಡಿರಬಹುದು?



ಮನೆ ಶಿಫ್ಟ್ ಮಾಡುವುದೆಂದರೆ ಇದೇ ಇರಬೇಕು. ಚೀನಾದ ಲಿಯು ಎಂಬ ಕಾರ್ಮಿಕ ಶೆಂಝೆಂಗ್ ಪ್ರಾಂತ್ಯದಿಂದ ತನ್ನ ಮೂಲ ಊರಾದ ರೊಂಗಾನ್‌ಗೆ ಐದು ವರ್ಷಗಳ ಹಿಂದೆ ಮನೆ ಬದಲಾಯಿಸುವ ಕಾರ್ಯ ಶುರು ಹಚ್ಚಿಕೊಂಡ. ಬೊಂಬು, ಪ್ಲಾಸ್ಟಿಕ್ ಕವರ್, ಹೊದಿಕೆಗಳಿಂದ ಮಾಡಿದ 60 ಕೆಜಿ ತೂಕದ ಮನೆಯನ್ನು ಹೊತ್ತುಕೊಂಡು ನಿತ್ಯ 20 ಮೈಲು ನಡೆಯುವುದು. ರಾತ್ರಿ ರಸ್ತೆಯ ಪಕ್ಕ ಮನೆಯನ್ನಿಟ್ಟು ಮಲಗುವುದು. ಬಾಡಿಗೆ ಉಳಿಯಿತಲ್ಲ. ಊಟ ತಿಂಡಿಗೆ ಚಿಂದಿ ಆಯ್ದು ಮಾರಾಟ ಮಾಡಿ ಹಣ ಗಳಿಸುವುದು. ಹೇಗಿದೆ ಲಿಯುನ 'ಪ್ಯಾಕರ್ಸ್ ಆ್ಯಂಡ್ ಮೂವರ್ಸ್' ವೈಖರಿ!

ಅಮೆರಿಕಾದ ಬೆನ್ ಕೋಕ್ಸ್ ಎಂಬಾತ ತನ್ನ ಭಾವಿ ಪತ್ನಿಗೆ ವಿಶೇಷವಾದ ನಿಶ್ಚಿತಾರ್ಥ ಉಂಗುರವನ್ನೇ ತೊಡಿಸಿದ್ದಾನೆ. ಆತ ಆಕೆಯ ಕೈ ಹಿಡಿದ ಕೂಡಲೇ ಆ ಉಂಗುರದಲ್ಲಿ ದೀಪಗಳು ಬೆಳಗುತ್ತವಂತೆ. ಒಂದು ವರ್ಷ ಕಾಲ ಕಷ್ಟಪಟ್ಟು ಆತನೇ ತಯಾರಿಸಿದ ಉಂಗುರವದು. ಉಂಗುರದಲ್ಲಿರುವ ಎಲ್‌ಇಡಿ ದೀಪಗಳು ಬೆಳಗಲು ಕೋಕ್ಸ್ ತನ್ನ ಕೈಗೆ ಅಯಸ್ಕಾಂತವಿರುವ ಬಳೆ ಧರಿಸುತ್ತಾನಂತೆ. ಉಂಗುರದ ಬಗ್ಗೆ ಅಲ್ಲ, ಬಳೆ ಬಗ್ಗೆ ಕೋಕ್ಸ್ ನಿಗಾ ವಹಿಸಿದರೆ ಒಳಿತು. ಇನ್ನೊಬ್ಬ ಅದನ್ನು ಧರಿಸಿ ಭಾವಿ ಪತ್ನಿಯನ್ನು ಪಟಾಯಿಸಿದರೆ...!




ಬಿಯರ್ ಕುಡಿಯುವುದಕ್ಕೆಂದು ಗೊತ್ತು. ಕೆಲವು ಸೆಲೆಬ್ರಿಟಿಗಳು ಸ್ನಾನಕ್ಕೆಂದು ಬಳಸುತ್ತಾರಂತೆ. ಸ್ಯಾನ್ ಫ್ರಾನ್ಸಿಸ್ಕೋದ ಸಾಬೂನು ತಯಾರಕ ಹಿರೋಮಿ ಮೈ ಉಜ್ಜುವ ಸಾಬೂನನ್ನೂ ಬಿಯರ್‌ನಿಂದಲೇ ತಯಾರಿಸಿದ್ದಾನಂತೆ. ಬಿಯರ್, ವೈನ್, ಖಾದ್ಯ ತೈಲ ಬಳಸಿ ಸಾಬೂನು ಬಿಲ್ಲೆ ತಯಾರಾಗಿದೆ. ಮೈ ಒರೆಸುವ ಟವಲ್‌ಗೂ ಬಿಯರ್ ಪರಿಮಳ ಬರಿಸಿಬಿಟ್ಟರೆ 'ಸಂಪೂರ್ಣ ಬಿಯರ್ ಸ್ನಾನದ ಪ್ಯಾಕೇಜ್' ಕೊಟ್ಟಂತಾಗುತ್ತದೆ.